# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಮಹಾದ್ವಾರ, ಜಿ.ಕೆ.ವಿ.ಕೆ. ಆವರಣ,
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು–560097

**ದೂರವಾಣಿ : 080–29721550, email: ksta.gok@gmail.com website: www.kstacademy.in**

---

**ನಂ: ಕವಿತಂಅ/ಆಡಳತ/06/2024–25** **ದಿನಾಂಕ: 28.05.2024**

**ದರಪಟ್ಟಿ ಆಹ್ವಾನ ಪ್ರಕಟಣೆ**

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಕಛೇರಿ ಕೆಲಸ ಕಾರ್ಯಗಳಿಗೆ ಅಗತ್ಯಕ್ಕನುಗುಣವಾಗಿ ಈ ಕೆಳಕಂಡ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಕರ್ನಾಟಕ ಸಾರ್ವಜನಿಕ ಪಾರದರ್ಶಕ ಸಂಗ್ರಹಣ ಅಧಿನಿಯಮ 1999 ಹಾಗೂ ಇದರ ನಿಯಮಗಳನ್ವಯ ಬಾಡಿಗೆ ವಾಹನಗಳ ಸೇವೆಯನ್ನು ಒದಗಿಸುವ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| Sl.No | Type of Vehicle |
|---|---|
| 1 | Swift Dezire A/c & Non A/c |
| 2 | Ertiga, Innova & Crysta |
| 3 | Tempo Traveler A/c & Non A/c |

**ಷರತ್ತುಗಳು ಮತ್ತು ನಿಬಂಧನೆಗಳು:**

1. ದರಪಟ್ಟಿಯನ್ನು ಅಕಾಡೆಮಿಯು ನೀಡಿರುವ ನಿಗದಿತ ನಮೂನೆಯಲ್ಲಿ ಮುದ್ರಿಸಿ ಸಲ್ಲಿಸಬೇಕು ಹಾಗೂ ಜಿ.ಎಸ್.ಟಿ ಮತ್ತು ಶಾಸನಬದ್ಧ ವೆಚ್ಚವನ್ನು ಸಹ ದರಪಟ್ಟಿಯಲ್ಲಿ ನಮೂದಿಸಿರಬೇಕು.
2. ಉತ್ತಮ ಸ್ಥಿತಿಯಲ್ಲಿರುವ ಮತ್ತು ಉತ್ತಮ ಚಾಲಕರನ್ನು ಹೊಂದಿರುವ ವಾಹನಗಳ ಸೇವೆಯನ್ನು ನೀಡಬೇಕಾಗಿರುತ್ತದೆ.
3. ಅಕಾಡೆಮಿಯು ಅವಶ್ಯಕತೆಗನುಗುಣವಾಗಿ ಕೋರಿದ ಸಂದರ್ಭದಲ್ಲಿ ಮಾತ್ರ ಬಾಡಿಗೆ ವಾಹನದ ಸೇವೆಯನ್ನು ಒದಗಿಸಬೇಕಾಗಿರುತ್ತದೆ.
4. ಬಾಡಿಗೆ ವಾಹನ ಬಿಲ್ಲನ್ನು ಸಲ್ಲಿಸಿದ ನಂತರ ಒಂದು ವಾರದೊಳಗಾಗಿ ನಿಯಮಾನುಸಾರ ಪಾವತಿ ಮಾಡಲಾಗುವುದು.
5. ಕರ್ತವ್ಯದ ಸಂದರ್ಭದಲ್ಲಿ ಯಾವುದೇ ರಿಪೇರಿ ಅಥವಾ ಅಡಚಣೆಯಾದಲ್ಲಿ ಟ್ರಾವೆಲ್ಸ್ ಸಂಸ್ಥೆಯು ಜವಾಬ್ದಾರರಾಗಿರುತ್ತಾರೆ.
6. ಬಾಡಿಗೆ ವಾಹನ ಸೇವೆಗೆ ಯಾವುದೇ ಮುಂಗಡ ಹಣ ನೀಡಲಾಗುವುದಿಲ್ಲ.
7. ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ದಿನಾಂಕ: 04.06.2024ರ ಸಂಜೆ 5.00 ಗಂಟೆಯೊಳಗಾಗಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಬೇಕು.
8. ಯಾವುದೇ ಕಾರಣ ನೀಡದೇ ದರಪಟ್ಟಿಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊಂದಿರುತ್ತಾರೆ.
9. ಯಾವುದೇ ಕಾರಣ ಹೇಳದೆ ದರಪಟ್ಟಿ ಆಹ್ವಾನ ಪ್ರಕಟಣೆಯ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಅಕಾಡೆಮಿ ಉಳಿಸಿಕೊಂಡಿರುತ್ತದೆ.
10. ಬಿಡ್ಡುದಾರರು ಈ ಮೇಲ್ಕಂಡ ಷರತ್ತುಗಳಿಗೆ ಮತ್ತು ನಿಯಾಮಾವಳಿಗೆ ಬದ್ಧರಾಗಿ ದರಪಟ್ಟಿಯನ್ನು ಸಲ್ಲಿಸುವುದು.

***–ಸಹಿ–***

***ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ***

ಕವಿತಂಅ

**To,**

Chief Executive Officer
Karnataka Science and Technology Academy
Prof. U R. Rao Vijnana Bhavan, Horticulture Science College Entrance
GKVK, Doddabettahalli Bus Stop, Vidyaranyapura Post, Bengaluru – 560 097